ನನಗೆ ಸಮಾಧಾನಕರವಾಗಿಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ತಾವು 4 ವೀಲ್ ಹಾಕಿದ ತಕ್ಷಣ ಬಸ್ ಓಡುವುದಿಲ್ಲವೆಂದು ಹೇಳಿದಿರಿ, ಅದನ್ನು ನಾವು ಕೇಳುವುದಿಲ್ಲ. ಏಕೆಂದರೆ ಅದು ನಮಗೆ ಗೊತ್ತಿದೆ. ನಮಗೆ ಬಸ್ ಸೌಲಭ್ಯಬೇಕು. ಇವರು ನಮ್ಮಲ್ಲಿ ರಸ್ತೆ ಕೆಟ್ಟಿರುವ ಒಂದು ಕಾರಣವನ್ನು ಕೊಡುತ್ತಾರೆ. ಆದರೆ ಹೈದರಾಬಾದ್ ಕರ್ನಾಟಕ ಜನತೆಗೆ ಈ ತರಹ ಉತ್ತರ ಹೇಳುವುದು ಸರಿಯಾದುದಲ್ಲ. ನಾನು ಏತಕ್ಕೆ ಹೇಳುತ್ತೇನೆಂದರೆ . ನೇರವಾಗಿ ಗುಲ್ಬರ್ಗಾ ಸಿಟಿಗೆ ಬರತಕ್ಕಂತಹ ಬಸ್‌ಗಳ ಟಾಪ್ ಮೇಲೆ ಜನ ಕುಳಿತುಕೊಂಡು ಬರುತ್ತಾರೆ. ನಾನು ಕಚ್ಚಾ ರಸ್ತೆಯ ವಿಷಯವನ್ನು ತಮ್ಮಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಹೈದರಾಬಾದ್, ಬೆಂಗಳೂರು, ಬೀದರ್, ರಾಯಚೂರಿನಲ್ಲಿ ಓಡತಕ್ಕಂತಹ ಬಸ್‌ಗಳ ಟಾಪ್ ಮೇಲೆ ಜನಗಳು ಕುಳಿತುಕೊಂಡು ಬರುತ್ತಿದ್ದಾರೆ. ಅಗಕ್ಕೆ ನಾನು ಕೇಳುತ್ತಿದ್ದೇನೆ, ತಾವು ಕೆಟ್ಟ ರಸ್ತೆಯೆಂದು ತಳ್ಳಿ ಹಾಕುವುದು ಬೇಡ. ಎರಡನೆಯದಾಗಿ 33 ಮಾರ್ಗಸೂಚಿಗಳನ್ನು ಹೆಚ್ಚಿಸಲು ಪ್ರಯತ್ನ ಪಡುತ್ತಿದ್ದೇವೆಂದು ತಾವು ಇದರಲ್ಲಿ ಹೇಳಿದ್ದೀರಿ. ನಿಮ್ಮ ಅಧಿಕಾರಿಗಳನ್ನು ಕೇಳಿ. ತಾಲ್ಲೂಕ್ ಪಂಚಾಯತ್ ಮೀಟಿಂಗ್‌ನಲ್ಲಿ ಇವರನ್ನು ಕರೆಸಿ ಹೇಳಿದರೆ ರಿಪೋರ್ಟ್ ಕೊಡುವುದಿಲ್ಲ. ಅವರನ್ನು ಕರೆಸಿ ಮಾತನಾಡಿದರೆ ಸರಿಯಾಗಿ ಮಾತನಾಡುವುದಿಲ್ಲ. ಇಲ್ಲಿ ಮಂತ್ರಿಗಳು ಈ ರೀತಿಯ ಉತ್ತರ ಕೊಟ್ಟರೆ ನಮಗೆ ಸಮಾಧಾನವಾಗುವುದಿಲ್ಲ. ನಮ್ಮ ಕಷ್ಟಗಳು ನಮಗೆ ಗೊತ್ತು. ನನಗೆ ಸ್ಪಷ್ಟವಾದ ಆಶ್ವಾಸನೆ ಕೊಡಿ, ಗುಲ್ಬರ್ಗಾ ಜಿಲ್ಲೆಯಲ್ಲಿ ಬಸ್‌ಗಳ ಟಾಪ್ ಮೇಲೆ ಜನ ಕುಳಿತುಕೊಂಡು ಹೋಗುತ್ತಾರೆ. ಯಾವತ್ತಿನಿಂದ ಜನ ಬಸ್‌ನಲ್ಲಿ ಕುಳಿತುಕೊಂಡು ಓಡಾಡತಕ್ಕಂತಹ ಕ್ರಮ ತೆಗೆದುಕೊಳ್ಳುತ್ತೀರಾ? ಬಸ್‌ನ ಮೇಲೆ ಏಕೆ ಕುಳಿತುಕೊಳ್ಳುತ್ತಾರೆಂದರೆ ಬಸ್‌ಗಳ ಕೊರತೆ ಇರುವುದರಿಂದ ನಿಮ್ಮ ಡ್ರೈವರ್, ಕಂಡಕ್ಟರ್‌ಗೆ ಹೇಳಿ ನೀವು ಕರೆಕ್ಟ್ ಟೈಮ್‌ಗೆ ಬಸ್ಸನ್ನು ಓಡಿಸಿ. ಈಗ ನಾನು ತಮ್ಮಲ್ಲಿ ನೇರವಾದ ಪ್ರಶ್ನೆ ಕೇಳುತ್ತಿದ್ದೇನೆ, ಬಸ್ ಮೇಲೆ ಇಂದಿನಿಂದ ಕುಳಿತುಕೊಂಡು ಹೋಗದ ಹಾಗೆ ಮಾಡುತ್ತೀರಾ? ಇದು ಒಂದನೆಯ ಪ್ರಶ್ನೆ, ಎರಡನೆಯದಾಗಿ ಬಸ್‌ಗಳು ಕರೆಕ್ಟ್ ಟೈಮ್‌ಗೆ ಸರಿಯಾಗಿ ಓಡುವ ಹಾಗೆ ಮಾಡುತ್ತೀರಾ? ಇವೆರಡಕ್ಕೂ ನನಗೆ ಸ್ಪಷ್ಟವಾಗಿ ಉತ್ತರ ಹೇಳಬೇಕು.

ಶ್ರೀ ಅಜೀಜ್ ಸೇಠ್ :- ಇನ್ನು ಒಂದೂವರೆ ತಿಂಗಳಲ್ಲಿ ರಿಕ್ರೂಟ್‌ಮೆಂಟ್ ಮಾಡುತ್ತೇವೆ ಅಲ್ಲಿಗೆ ಈ ನೌಕರರ ಕೊರತೆ ಹೋಗುತ್ತದೆ. ಎರಡನೆಯದಾಗಿ ಹೇಳುತ್ತಿದ್ದೇನೆ, ಬಸ್ ಮೇಲೆ ಕುಳಿತುಕೊಂಡು ಹೋಗಬಾರದೆಂದು ಜನಗಳಿಗೆ ತಿಳಿಯಬೇಕು, ನಾವು ಬೇಡ ಎಂದರೂ ಅವರು ಅದೇ ರೀತಿ ಮಾಡಿದರೆ I shall not be responsible. I will issue directions to the police, whether it is KSRTC bus or a private. ಬಸ್ ಮೇಲೆ ಜನ ಕುಳಿತುಕೊಳ್ಳುವವರಿಗೆ ಪ್ರಾಸಿಕ್ಯೂಟ್ ಮಾಡಿ ಎಂದು ಹೇಳುತ್ತೇವೆ. ಅವರನ್ನು ಯಾರು ಕೂರಿಸುತ್ತಾರೆ ? ಕಂಡಕ್ಟರ್, ಡ್ರೈವರ್ ಅವರಿಗೂ ಪ್ರಾಸಿಕ್ಯೂಟ್ ಮಾಡಿ ಎಂದು ಹೇಳುತ್ತೇವೆ.

ಛೇರ್ಮನ್: ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರೇ, ನಿಮ್ಮ ಪ್ರಶ್ನೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಆಗಿದೆ.

ಶ್ರೀ ಎ.ಎಸ್.ನಾಡಗೌಡ:-ಅಧ್ಯಕ್ಷರೇ, ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಪ್ರಶ್ನೆಗೆ ಉತ್ತರ ತಯಾರಾಗಿದೆ, ಆದರೆ ಸದಸ್ಯರು ಇಲ್ಲ.

ಛೇರ್ಮನ್:- ಇಲ್ಲ, ನನಗೆ ಇಲ್ಲಿ ಇನ್‌ಫರ್‌ಮೇಷನ್ ಪ್ರಕಾರ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಇದು ಟ್ರಾನ್ಸ್‌ಫರ್ ಆಗಿದೆ.

ಶ್ರೀ ಎ.ಎಸ್.ನಾಡಗೌಡ:- ಉತ್ತರ ತಯಾರಾಗಿದೆ.

ಛೇರ್ಮನ್ :- ಸದಸ್ಯರು ಆಬ್ಸೆಂಟ್ ಇದ್ದಾರೆ.

ವಿಷಯ:- ಬಂಟ್ವಾಳ ತಾಲ್ಲೂಕಿನ ವಿದ್ಯುತ್ ಸಹಕಾರ ಸಂಘವನ್ನು ಚುರುಕುಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 435 (2114)

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ)ರ ಪರವಾಗಿ ಶ್ರೀ ಜೆ.ಎಸ್.ಆಚಾರ್(ಬೈಂದೂರು)

ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬಂಟ್ವಾಳ ತಾಲ್ಲೂಕಿನ "ವಿದ್ಯುತ್ ಸಹಕಾರಿ ಸಂಘ" ಯಾವಾಗ ಸ್ಥಾಪನೆ ಆಗಿದೆ, ಅದರ ಕಾರ್ಯಕ್ಷೇತ್ರವೇನು.

ಆ ಅದು ನಿಷ್ಕ್ರಿಯವಾಗಿರಲು ಕಾರಣಗಳೇನು.

ಇ ಈ ವಿದ್ಯುತ್ ಸಹಕಾರಿ ಸಂಘವನ್ನು ಚುರುಕುಗೊಳಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?

ಅ ದಿನಾಂಕ 29-5-1986 ರಲ್ಲಿ ನೊಂದಣಿಯಾಗಿದೆ ಇದರ ಕಾರ್ಯಕ್ಷೇತ್ರ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಜಿಲ್ಲೆಗೆ ಸೀಮಿತಗೊಂಡಿದೆ.

ಆ ಸದರಿ ಸಂಘದ ಯೋಜನೆಗೆ ಗ್ರಾಮೀಣ ವಿದ್ಯುತ್ತೀಕರಣ ನಿಗಮ, ನವದೆಹಲಿ ಇದರಿಂದ ಮಂಜೂರಾತಿ ದೊರಕಿರುವುದಿಲ್ಲ.

ಇ ಗ್ರಾಮೀಣ ವಿದ್ಯುತ್ತೀಕರಣ ನಿಗಮದಿಂದ ಯೋಜನಾ ವರದಿಗೆ ಮಂಜೂರಾತಿ ದೊರೆತ ತಕ್ಷಣ ಮುಂದಿನ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಜೆ.ಎಸ್.ಆಚಾರ್:- ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಒಂದು ವಿದ್ಯುತ್ ಸಹಕಾರ ಸಂಘ ಸ್ಥಾಪನೆ ಆಗಬೇಕೆಂದು ಸರ್ಕಾರ ತೀರ್ಮಾನ ಮಾಡಿ ಕೆಲವು ವರ್ಷಗಳ ಹಿಂದೆ ಸದಸ್ಯರಿಂದ ಷೇರ್ ಬಂಡವಾಳ ಎಲ್ಲಾ ಸಂಗ್ರಹವಾಗಿ ಪ್ರಾರಂಭಿಕ ಫಾರ್‌ಮೇಷನ್ ಎಲ್ಲಾ ಆಗಿಹೋಯಿತು. ಆದರೆ ದುರಾದೃಷ್ಟವಶಾತ್ ಇಲ್ಲಿ ಕೊಟ್ಟ ಉತ್ತರದಲ್ಲಿ ಸಂಘದ ಯೋಜನೆ ಗ್ರಾಮೀಣ ವಿದ್ಯುದ್ದೀಕರಣ ನಿಗಮ, ನವದೆಹಲಿಯಿಂದ ಇನ್ನು ಮಂಜೂರಾತಿ ಬಂದಿಲ್ಲ ಎಂದು ಹೇಳಿದ್ದೀರಿ. ಈ ಮಂಜೂರಾತಿಗೆ ಯಾವಾಗ ಹೋಯಿತು? ಮಂಜೂರಾತಿ ಇಲ್ಲದೇ ಇವತ್ತು ಸಂಘ ಸ್ಥಾಪನೆ ಮಾಡುವುದು ಏಕೆ? ಜನರು ಅಲ್ಲಿ ಬಹಳ ಬೇಸರದಿಂದ ಇದ್ದಾರೆ. ಈ ಒಂದು ನಮ್ಮ , ಷೇರ್ ಕ್ಯಾಪಿಟಲ್ ತೆಗೆದುಕೊಂಡದ್ದು ಏಕೆ? ಈ ಒಂದು ಕ್ರಮ ಬೇರೆ ಕಡೆಯೆಲ್ಲಾ ಆಗಿದೆ. ಹುಕ್ಕೇರಿಯಲ್ಲಿ ಇಂತಹ ಒಂದು ಸಂಘ ನಡೆಯುತ್ತಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಕೆ ಆಗಲಿಲ್ಲ? ಅಲ್ಲಿ ಯಾವಾಗ ಆಗುತ್ತದೆಂದು ಕೇಳುವುದಕ್ಕೆ ಬಯಸುತ್ತೇನೆ.

ಅ 1991-92ನೇ ಸಾಲಿನಲ್ಲಿ ಅನುದಾನಿತ ಸಂಸ್ಥೆಗಳಿಗೆ ಯಂತ್ರೋಪಕರಣ ಖರೀದಿಗೆ ಹಣ ಒದಗಿಸಿಲ್ಲವಾದ ಕಾರಣ ಯಂತ್ರೋಪಕರಣಗಳನ್ನು ಖರೀದಿಸಿಲ್ಲ.

ಪ್ರತಿಯೊಂದು ಖಾಸಗಿ ಅನುದಾನಿತ ಸಂಸ್ಥೆಯಲ್ಲಿಯೂ ಯಂತ್ರೋಪಕರಣ ಖರೀದಿಗೆ ಒಂದು ಸಮಿತಿ ಇರುತ್ತದೆ. ಸಮಿತಿಯು ಕೊಟೇಶನ್ ಕರೆಯುತ್ತದೆ. ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶಕರ ಅನುಮೋದನೆ ಪಡೆದ ನಂತರ ಖರೀದಿಸಲಾಗುತ್ತದೆ.

ಇ ಇಲ್ಲ.

ಈ ಇಲ್ಲ.

ಶ್ರೀ ಎಸ್ ಷಫಿ ಅಹಮದ್:- ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ 51 ಇಂಜಿನಿಯರಿಂಗ್ ಕಾಲೇಜುಗಳು ಮತ್ತು 158ಪಾಲಿಟೆಕ್ನಿಕ್‌ಗಳು ಇವೆ ಎಂದು ಹೇಳಿದ್ದಾರೆ. ಈ ವರ್ಷ ಯಾವುದಾದರೂ ಹೊಸದಾಗಿ ಪಾಲಿಟೆಕ್ನಿಕ್ ಆಗಲಿ, ಇಂಜಿನಿಯರಿಂಗ್ ಕಾಲೇಜಾಗಲಿ ಮಂಜೂರು ಮಾಡುತ್ತೀರಾ? ಗ್ರ್ಯಾಂಟ್ ಇನ್ ಏಡ್ ಬಗ್ಗೆ ಪ್ರಶ್ನೆ ಕೇಳಿರುವುದಕ್ಕೆ 11 ಇಂಜಿನಿಯರಿಂಗ್ ಕಾಲೇಜುಗಳು ಮತ್ತು 7 ಪಾಲಿಟೆಕ್ನಿಕ್‌ಗಳಿಗೆ ಗ್ರ್ಯಾಂಟ್ ಕೊಡುತ್ತಿದ್ದೇವೆಂದು ಹೇಳಿದ್ದೀರಿ. ಇವತ್ತು ಸೆಲ್ಫ್ ಎಂಪ್ಲಾಯ್‌ಮೆಂಟ್ ಜನರೇಷನ್

ಒದಗಿಸಲು ಇಂಜಿನಿಯರಿಂಗ್ ಕಾಲೇರು ಮತ್ತು ಪಾಲಿಟೆಕ್ನಿಕ್‌ಗಳಿಗೆ ಗ್ರ್ಯಾಂಟನ್ನು ತಾವು ಯಾವಾಗಿನಿಂದ ಕೊಡುತ್ತೀರಿ?ಮತ್ತು ಹೊಸದಾಗಿ ಟ್ರೇಡ್ಸನ್ನು ಸ್ಯಾಂಕ್ಷನ್ ಮಾಡಿದರೆ ರೀಸೆಂಟ್ ಟೆಕ್ನಾಲಜಿಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಬಹಳ ಒಳ್ಳೆಯ ಅವಕಾಶ ಸಿಕ್ಕುತ್ತದೆಯೇ ಎಂದರೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ:- ಸದ್ಯದಲ್ಲಿ ಯಾವುದೇ ಇಂಜಿನಿಯರಿಂಗ್ ಕಾಲೇಜುಗಳನ್ನಾಗಲೀ ಪಾಲಿಟೆಕ್ನಿಕ್‌ಗಳಾಗಲಿ ಅನುದಾನಕ್ಕೆ ಸೇರಿಸುವಂಥ ಪರಿಸ್ಥಿತಿಯಲ್ಲಿ ನಾವಿಲ್ಲ. ನಮ್ಮ ಶಿಕ್ಷಣ ಇಲಾಖೆಯಲ್ಲಿ ಆ ಯೋಚನೆ ಇಲ್ಲ. ಆದರೆ ಹೊಸ ಕೋರ್ಸ್‌ಗಳನ್ನು ಇತ್ತೀಚಿನ ಪರಿಸ್ಥಿತಿಗನುಗುಣವಾಗಿ ಆನ್ ಏಡೆಡ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಕೊಡುವ ಬಗ್ಗೆ ನಾವು ಸ್ಪಂಧಿಸಬೇಕಾಗಿದೆ. ನಾವು ಹೊಸ ಕೋರ್ಸ್‌ಗಳನ್ನು ಮಾಡಬೇಕು. ಈಗ ಅನವಶ್ಯಕವಾದ, ಉಪಯೋಗವಿಲ್ಲದ ಕೋರ್ಸ್‌ಗಳನ್ನು ಏಡೆಡ್ ಅಥವಾ ನಾನ್ ಏಡೆಡ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಈಗಿನ ಅವಶ್ಯಕತೆಯನ್ನು ಅನುಸರಿಸಿಕೊಂಡು ಹೊಸ ಕೋರ್ಸ್‌ಗಳಿಗೆ ಅನುಮತಿ ಕೊಡಲು ನಾವು ಸಿದ್ದರಾಗಿದ್ದೇವೆ. ಡಾ.ಎಲ್.ಎಸ್.ಶ್ರೀನಾಥ್ ಎನ್ನುವವರ ಅಧ್ಯಕ್ಷತೆಯಲ್ಲಿ ನಾವು ಒಂದು ಸಮಿತಿಯನ್ನು ಮಾಡಿದ್ದೇವೆ. ಅವರು ಅಲ್ಲಿ ಸರಿಯಾದ ಪರಿವೀಕ್ಷಣೆಯನ್ನು ನಡೆಸಿ, ಸರಿಯಾದ ವರದಿಯನ್ನು ಕೊಡುತ್ತಾರೆ. ಅಲ್ಲಿ ಹೊಸ ಕೋರ್ಸ್‌ನ್ನು ಮಾಡುವುದಕ್ಕೆ, ಅಲ್ಲ ಅವಶ್ಯಕತೆ ಇದ್ದರೆ,. ಅಥವಾ ಸರಿಯಾದ ಇನ್‌ಫ್ರಾಸ್ಟ್ರಕ್ಚರ್ ಇದ್ದರೆ ಅದನ್ನು ಕೊಡುವುದಕ್ಕೆ ತೊಂದರೆ ಇಲ್ಲ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೂಡ ಪ್ರಥಮವಾಗಿ ಆಯಾಯ ವಿಶ್ವವಿದ್ಯಾನಿಲಯಗಳಿಗೆ ಅರ್ಜಿಗಳನ್ನು ಹಾಕಿಕೊಳ್ಳಬೇಕು. ಆ ವಿಶ್ವವಿದ್ಯಾನಿಲಯದವರು ಯಾವುದೇ ಹೊಸ ಕೋರ್ಸಿಗೆ ಶಿಫಾರಸ್ಸು ಮಾಡಿದರೆ ಅದನ್ನು ನಾವು ಪುನಃ ಶ್ರೀನಾಥ್ ಕಮಿಟಿಗೆ ಕಳುಹಿಸಿಕೊಡುತ್ತೇವೆ. ಅವರು ಇದರ ಯುಕ್ತಾಯುಕ್ತತೆಯನ್ನು ಪರಿಶೀಲಿಸಿ ರೆಕಮೆಂಡ್ ಮಾಡಿದರೆ ಆಗ ನಾವು ಅದಕ್ಕೆ ಮಂಜೂರಾತಿ ಕೊಡುತ್ತೇವೆ.

ಶ್ರೀ ಎಸ್ ಷಫಿ ಅಹಮದ್:-1991-92ರ ಸಾಲಿನಲ್ಲಿ ಯಾವ ಗ್ರ್ಯಾಂಟ್ ಇನ್ ಏಡ್ ಇನ್‌ಸ್ಟಿಟ್ಯೂಷನ್ಸಗೂ ಯಾವ ಹಣವನ್ನು ಒದಗಿಸಿಲ್ಲವೆಂದು ಹೇಳಿದ್ದೀರಿ. ಸರಿಯಾದ ಪ್ರಯೋಗಶಾಲೆಗಳು, ಅದರಲ್ಲಿ ಸೂಕ್ತ ಸಮರ್ಪಕವಾದ ಸಲಕರಣೆಗಳು ಇಲ್ಲದಿದ್ದರೆ ಕ್ವಾಲಿಟಿ ಆಫ್ ಎಜುಕೇಷನ್‌ನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ, ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಗ್ರ್ಯಾಂಟ್ ಇನ್ ಏಡ್‌ನ್ನು ಒದಗಿಸಿಕೊಟ್ಟರೆ ಬಹಳ ಒಳ್ಳೆಯದು. ಎರಡನೆಯದಾಗಿ ಎಕ್ಸಾಮಿನೇಷನ್ ಸೆಂಟರ್ಸ್ ಬಗ್ಗೆ ಈಗತಾನೆ ಮಾನ್ಯ ಜಯಚಂದ್ರರವರು ಹೇಳಿದರು. ಎಕ್ಸಾಮಿನೇಷನ್ ಕಂಡಕ್ಟ್ ಮಾಡಬೇಕಾದರೆ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ಅದರಲ್ಲೂ ಟೆಕ್ನಿಕಲ್ ಎಜುಕೇಷನ್ ಬೋರ್ಡ್ ಬಿಲ್ಡಿಂಗ್‌ನಲ್ಲಿ ಏನಾಗಿದೆಯೆಂದರೆ, ಅಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟ್ ಮತ್ತು ಇತರೆ ಡಿಪಾರ್ಟ್‌ಮೆಂಟ್‌ಗಳಿಗೆ ತಾವು ಜಾಗ ಕೊಟ್ಟಿದ್ದೀರಿ. ಇದನ್ನೆಲ್ಲಾ ಎವಿಕ್ಟ್ ಮಾಡಿಸಿ ಆ ಕಟ್ಟಡವನ್ನು ಪೂರ್ತಿ ಟೆಕ್ನಿಕಲ್ ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಇಟ್ಟುಕೊಳ್ಳಿ ಆಗ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತದೆ. ಈ ವಿಷಯಗಳ ಬಗ್ಗೆ ತಮ್ಮಿಂದ ಮಾಹಿತಿ ಕೇಳುತ್ತಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ತಮಗೆ ಗೊತ್ತಿದೆ. ಇದರ ಬಗ್ಗೆ ಯು.ಜಿ.ಸಿ.ಯಿಂದ ನಮಗೆ ಸಾಕಷ್ಟು ಹಣ ಸಿಗುತ್ತದೆ. ಮಾನವ ಸಂಪನ್ಮೂಲ ಇಲಾಖೆಯವರಿಗೆ ಸರಿಯಾದಂಥ ಮಾಹಿತಿಯನ್ನು ಒದಗಿಸಿಕೊಟ್ಟರೆ ಇಂಜಿನಿಯರಿಂಗ್ ಕಾಲೇಜುಗಳಿಗೆ ಅವರಿಂದ ಸಹಾಯ ದೊರೆಯುತ್ತದೆ. ಮುಖ್ಯವಾಗಿ ಖಾಸಗಿ ಇಂಜಿನಿಯರಿಂಗ್ ಕಾಲ್ಜುಗಳವರು ಇಂಥ ಲಾಭವನ್ನು ಕಡಿಮೆ ಮಟ್ಟದಲ್ಲಿ ಪಡೆದುಕೊಳ್ಳುತ್ತಿದ್ದಾರೆ. ಇತ್ತೀಚಿಗೆ ಅನೇಕಾನೇಕ ಖಾಸಗಿ ಸಂಸ್ಥೆಗಳವರು ಬೇರೆ ರೀತಿಯಿಂದ ಲಕ್ಷಾಂತರ ರೂಪಾಯಿಗಳನ್ನು ಪಡೆಯತಕ್ಕಂಥ ಕೆಲಸ ಮಾಡಿದ್ದಾರೆ. ಇನ್ನು ಪಾಲಿಟೆಕ್ನಿಕ್ ಬಗ್ಗೆ ಯು.ಜಿ.ಸಿ.ಯವರು ಹಣ ಕೊಡುವುದಿಲ್ಲ ಎ.ಬಿ.ಸಿ.ಟಿ.ಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಒಂದು ಫಂಡಿಂಗ್

ವ್ಯವಸ್ಥೆಯೂ ಇಲ್ಲ. ಇದರ ಬಗ್ಗೆ ನಮ್ಮ ಹತ್ತಿರವೂ ಸಹ ಹಣವಿಲ್ಲ. ಆದ್ದರಿಂದ. ಇದರ ಬಗ್ಗೆ ಹೆಚ್ಚಿನ ಸಹಾಯ ಮಾಡಲಿಕ್ಕೆ ಬಹುಶ: ನಮಗೆ ಸಾಧ್ಯವಿಲ್ಲ ಮತ್ತೆ ಈ ಪರೀಕ್ಷಾ ಕೇಂದ್ರಗಳ ಬಗ್ಗೆ, ತಾವು ಏನು ಹೇಳಿದ್ದೀರಿ, ಆ ಸೂಚನೆಗಳನ್ನು ಗಮನಿಸಿ ಆ ಬಗ್ಗೆ ಸರ್ಕಾರದಿಂದ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರಿಎಸ್.ಷಫಿ ಅಹಮದ್:- ಹೊಸದಾಗಿ ಈ ವರ್ಷ ಇಂಜಿನಿಯರಿಂಗ್ ಕಾಲೇಜುಗಳನ್ನು ಮತ್ತು ಪಾಲಿಟೆಕ್ನಿಕ್‌ಗಳನ್ನು ಕೊಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇವೆ.

ಶ್ರಿ ಎಂ.ವೀರಪ್ಪ ಮೊಯಿಲಿ:- ಈ ಬಗ್ಗೆ ಸರ್ಕಾರ ಇಷ್ಟರವರೆಗೆ ಯಾವ ರೀತಿ ಸ್ವರೂಪದ ನಿರ್ಣಯವನ್ನೂ ತೆಗೆದುಕೊಂಡಿಲ್ಲ.

ಛೇರ್ಮನ್:- ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಷಯ:- ರಾಜ್ಯ ಕೃಷಿ ಭೂ ಅಭಿವೃದ್ಧಿ ಬ್ಯಾಂಕಿನಿಂದ ಟ್ರ್ಯಾಕ್ಟರ್‌ಗಳನ್ನು ಖರೀದಿಸಲು ಸಾಲ ಮಂಜೂರಾತಿ ಮಾಡುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 424 (2186)

ಶ್ರಿ ಆರ್.ಎಲ್.ಜಾಲಪ್ಪ (ದೊಡ್ಡಬಳ್ಳಾಪುರ):- ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ ರಾಜ್ಯ ಕೃಷಿ ಭೂ ಅಭಿವೃದ್ಧಿ ಬ್ಯಾಂಕಿನಿಂದ 1986 ರಿಂದ ಇಲ್ಲಿಯವರೆಗೆ ಕೊಟ್ಟ ಸಾಲ ಎಷ್ಟು (ವರ್ಷವಾರು ವಿವರಗಳನ್ನು ನೀಡುವುದು)

ಆ ಈ ಒಂದು ಸಾಲದ ಮೊತ್ತದಲ್ಲಿ ಟ್ರಾಕ್ಟರುಗಳಿಗಾಗಿ ಕೊಟ್ಟಿರುವ ಸಾಲ ಎಷ್ಟು ಹಾಗೂ ಈ ಸಾಲದ ಹಣದಲ್ಲಿ ಎಷ್ಟು ಟ್ರಾಕ್ಟರುಗಳನ್ನು ಖರೀದಿಸಬಹುದು.

ಇ ಸಾಲ ವಸೂಲು ಶೇಕಡಾ ಎಷ್ಟು ಆಗಿದೆ ಹಾಗೂ ಟ್ರಾಕ್ಟರ್ ಸಾಲಗಾರರಿಂದ ಬರಬೇಕಾಗಿರುವ ಸುಸ್ತಿ ಹಣ ಎಷ್ಟು ?

ಶ್ರಿ ಎಸ್.ಆರ್.ಮೊರೆ (ಸಹಕಾರ ರಾಜ್ಯ ಸಚಿವರು)-/

ಅ ಒಟ್ಟು ರೂ. 43,845-72 ಲಕ್ಷಗಳು

ವರ್ಷ	ರೂಪಾಯಿ ಲಕ್ಷಗಳಲ್ಲಿ
1985-86	4686.90
1986-87	5254.59
1987-88	4276-60
1988-89	9080-16
1989-90	7639-16
1990-91	7216-54
1991-92	5691-77

ಜನವರಿ 92ರವರೆಗೆ	43,845-72

ಆ ಟ್ರಾಕ್ಟರುಗಳಿಗಾಗಿ ಸಾಲ ರೂ.8963.41 ಲಕ್ಷಗಳು. ಖರೀದಿಸಬಹುದಾದ ಟ್ರಾಕ್ಟರುಗಳ ಸಂ. 6908